# ರಾಮಕೃಷ್ಣ ಮಿಷನ್ ಆಡಳಿತ ಮಂಡಳಿಯ ವಾರ್ಷಿಕ ವರದಿಯ ಸಾರಾಂಶ - 2018-2019

**ರಾ**ಮಕೃಷ್ಣ ಮಿಷನ್ನಿನ ೧೧೦ನೇ ವಾರ್ಷಿಕ ಸಭೆಯು ೨೦೧೯ರ ಡಿಸೆಂಬರ್ ೧೫ರ ಭಾನುವಾರ ಮಧ್ಯಾಹ್ನ ೩.೩೦ಕ್ಕೆ ಬೇಲೂರು ಮಠದಲ್ಲಿ ನಡೆಯಿತು. ಸಭೆಯಲ್ಲಿ ಮಂಡಿಸಲಾದ ವರದಿಯ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ.

ರಾಮಕೃಷ್ಣ ಮಿಷನ್ ಈ ಕೆಳಗಿನ ಮಾನ್ಯತೆಗಳನ್ನು ಪಡೆದಿದೆ : ೧. ದಕ್ಷಿಣ ಆಫ್ರಿಕಾದ ರಾಮಕೃಷ್ಣ ಮಿಷನ್‌ನ ಚಟುವಟಿಕೆಗಳನ್ನು ಗುರುತಿಸಿ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು **ಪ್ರವಾಸಿ ಭಾರತೀಯ ಪ್ರಶಸ್ತಿ**ಯನ್ನು ನೀಡಿತು. ೨. ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿಯು (NAAC) **RKMVERI** (deemed to be University), ಬೇಲೂರು, ಇದಕ್ಕೆ ಅತ್ಯುನ್ನತ ಶ್ರೇಣಿಯಾದ A++ ಅನ್ನು ನೀಡಿತು. ೩. ಪಶ್ಚಿಮ ಬಂಗಾಳ ಸರ್ಕಾರದ ಶಾಲಾ ಶಿಕ್ಷಣ ಇಲಾಖೆಯಿಂದ **ಪುರುಲಿಯಾ** ವಿದ್ಯಾಪೀಠ ಅತ್ಯುತ್ತಮ ಸ್ಕೂಲ್ ಪ್ರಶಸ್ತಿಯನ್ನು ಪಡೆಯಿತು.

ರಾಮಕೃಷ್ಣ ಮಠ ಮತ್ತು ಮಿಷನ್ ಹಲವಾರು ಶಾಖಾಕೇಂದ್ರಗಳು **ಸ್ವಾಮಿ ವಿವೇಕಾನಂದರ ೧೨೫ನೇ ಭಾಷಣಗಳ ವಾರ್ಷಿಕೋತ್ಸವವನ್ನು** (ಅಮೆರಿಕಾದ ಚಿಕಾಗೊ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನ) ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸ್ಮರಿಸಿತು. ಪ್ರಬಂಧ ಬರೆಯುವ, ಪಠಣ ಮತ್ತು ಇತರ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸುಮಾರು ೧.೧೪ ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಮ್ಮ ಕೇಂದ್ರಗಳು ಯುವಕರು ಮತ್ತು ಭಕ್ತರಿಗೆ ೮೮ ಸಮಾವೇಶಗಳನ್ನು ನಡೆಸಿದ್ದು, ಇದರಲ್ಲಿ ಸುಮಾರು ೩೪,೦೦೦ ಜನರು ಭಾಗವಹಿಸಿದ್ದರು. ಅಮೆರಿಕಾ ಮತ್ತು ಇತರ ದೇಶಗಳಲ್ಲಿನ ನಮ್ಮ ಕೇಂದ್ರಗಳು ಸಾರ್ವಜನಿಕ ಸಭೆಗಳು, ಉಪನ್ಯಾಸಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ನಡೆಸಿದವು.

ಈ ಕೆಳಕಂಡ ಪ್ರದೇಶಗಳಲ್ಲಿ ರಾಮಕೃಷ್ಣ ಮಿಷನ್ನಿನ ನೂತನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ೧) **ಬಿಲಾಸ್‌ಪುರ**-ಛತ್ತೀಸ್‌ಗಢ, ೨) **ಕಟಕ್**-ಓಡಿಶಾ, ೩) **ಯಾದಾದ್ರಿ ಭುವನಗಿರಿ**-ತೆಲಂಗಾಣ. ಬೇಲೂರು ಮಠದ ಪ್ರಧಾನ ಕಛೇರಿಯ ನೇರ ಮೇಲ್ವಿಚಾರಣೆಯಲ್ಲಿ ಪಶ್ಚಿಮ ಬಂಗಾಳದ ವರ್ಧಮಾನ ಜಿಲ್ಲೆಯ **ಶ್ಯಾಮಸಾಯೆರ್** ಕೇಂದ್ರವನ್ನು ೨೦೧೮ರ ಸೆಪ್ಟೆಂಬರ್‌ನಲ್ಲಿ ಉಪಕೇಂದ್ರವನ್ನಾಗಿ ಪ್ರಾರಂಭಿಸಲಾಗಿತ್ತು. ತರುವಾಯ ಕೇಂದ್ರವನ್ನು ಅಕ್ಟೋಬರ್ ೨೦೧೯ರಲ್ಲಿ ಪೂರ್ಣ ಪ್ರಮಾಣದ ಶಾಖಾಕೇಂದ್ರವನ್ನಾಗಿ ಮಾಡಲಾಯಿತು. **ಅಹಮದಾಬಾದ್** ಕೇಂದ್ರವನ್ನು ರಾಜಕೋಟ್ ಆಶ್ರಮದ ಉಪಕೇಂದ್ರವಾಗಿ ಪ್ರಾರಂಭಿಸಲಾಗಿದೆ. ದಕ್ಷಿಣ ಆಫ್ರಿಕಾದ **ಫೀನಿಕ್ಸ್** ಆಶ್ರಮವನ್ನು ರಾಮಕೃಷ್ಣ ಮಿಷನ್ನಿನ ಪೂರ್ಣ ಪ್ರಮಾಣದ ಶಾಖಾಕೇಂದ್ರವನ್ನಾಗಿ ಮಾಡಲಾಗಿದೆ. ಐರ್ಲೆಂಡಿನ **ಡಬ್ಲಿನ್**‌ನಲ್ಲಿ ರಾಮಕೃಷ್ಣ ಮಠದ ನೂತನ ಶಾಖಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

**ಶೈಕ್ಷಣಿಕ ಕ್ಷೇತ್ರ**ದಲ್ಲಿ ಈ ಕೆಳಗಿನ **ಹೊಸ ಪ್ರಗತಿಗಳು** ಉಲ್ಲೇಖನೀಯ: ೧)ಪಿಯರ್ಲೆಸ್ ಸ್ಕಿಲ್ ಅಕಾಡೆಮಿಯ ಸಹಯೋಗದೊಂದಿಗೆ ನಮ್ಮ ಕೇಂದ್ರಗಳು ನಡೆಸುವ ವೃತ್ತಿಪರ ತರಬೇತಿ ಕೆಲಸಗಳನ್ನು ಬಲಪಡಿಸಲು ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ೨) **ಬಾರಾನಗರ** ಮಿಷನ್ ಕೇಂದ್ರವು ನಡೆಸುತ್ತಿರುವ ಶಾಲೆಯಲ್ಲಿ ಹೈಯರ್ ಸೆಕೆಂಡರಿ ವಿಭಾಗವನ್ನು ಸೇರಿಸಲಾಗಿದೆ. ೩) **ಗಾರ್ಬೆಟಾ** ಕೇಂದ್ರವು ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದೆ. ೪) **ಲಮ್‌ಡುಂಗ್** ಕೇಂದ್ರವು ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದೆ. ೫) **ಮಾಲ್ಡಾ** ಕೇಂದ್ರವು ತಮ್ಮ ಶಾಲೆಯಲ್ಲಿ ಆಂಗ್ಲ ಮಾಧ್ಯಮವನ್ನು ಆರಂಭಿಸಿದೆ.

**ವೈದ್ಯಕೀಯ ಕ್ಷೇತ್ರ**ದಲ್ಲಿ ಈ ಕೆಳಗಿನ **ಹೊಸ ಬೆಳವಣಿಗೆಗಳು** ಉಲ್ಲೇಖನೀಯ: ೧) **ಡೆಹರಾಡೂನ್** ಕೇಂದ್ರವು ವಿಶೇಷ ಕಣ್ಣಿನ ಆರೈಕೆ ಕೇಂದ್ರವನ್ನು ಪ್ರಾರಂಭಿಸಿತು. ೨) **ಇಟಾನಗರ** ಕೇಂದ್ರವು ಎರಡು ಶಸ್ತ್ರಚಿಕಿತ್ಸಾ ವಿಭಾಗಗಳನ್ನು ವಿಸ್ತರಿಸಿತು. ೩) ಕಂಖಲ್ ಸೇವಾಶ್ರಮವು ಎಂಟು ಹಾಸಿಗೆಗಳಿರುವ ಉನ್ನತ ಆರೈಕೆಯ ವಿಭಾಗವನ್ನು ಆರಂಭಿಸಿತು. ೪) **ಲಕ್ನೌ** ಕೇಂದ್ರವು ಸಂಪೂರ್ಣ ಸುಸಜ್ಜಿತ ಐ.ಯು.ಐ. ಪ್ರಯೋಗಾಲಯವನ್ನು ಸ್ಥಾಪಿಸಿತು. ೫) **ಸೇವಾ ಪ್ರತಿಷ್ಠಾನ** ಕೇಂದ್ರವು ಕಾರ್ಡಿಯಾಲಜಿ ವಾರ್ಡ್ ನಿರ್ಮಿಸಿ, ಎಂಡೋಕ್ರಿನಾಲಜಿ ವಿಭಾಗವನ್ನು ಪ್ರಾರಂಭಿಸಿತು. ೬) **ವಿಶಾಖಪಟ್ಟಣ** ಕೇಂದ್ರವು ಸೆರೆಬ್ರಲ್ ಪಾಲ್ಸಿ ಕ್ಲಿನಿಕ್ ಮತ್ತು ಮಕ್ಕಳ ಕಲಿಕಾ ಕೇಂದ್ರದಲ್ಲಿ ಸ್ಪೀಚ್ ಥೆರಪಿ ಘಟಕವನ್ನು ಸ್ಥಾಪಿಸಿತು.

**ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಈ ಕೆಳಗಿನ ಹೊಸ ಯೋಜನೆಗಳು ಉಲ್ಲೇಖನೀಯ:** ೧) **ಖೇತ್ರಿ** ಕೇಂದ್ರವು ಸ್ಥಳೀಯ ಮಹಿಳೆಯರಿಗೆ ಕರಕುಶಲ ತರಬೇತಿ ಕೇಂದ್ರವನ್ನು ಸ್ಥಾಪಿಸಿದೆ. ೨) **ರಾಂಚಿ ಮೊರಬಾದಿ** ಕೇಂದ್ರವು ೬೯೯ ಹೆಕ್ಟರ್ ಭೂಮಿಯನ್ನು ಒಳಗೊಂಡ ಜಲಾನಯನ (Watershed) ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. ಮತ್ತು ಗುಣಮಟ್ಟದ ಬೀಜಗಳನ್ನು ಅಭಿವೃದ್ಧಿಪಡಿಸಲು ಬೀಜ ಗ್ರಾಮ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಈ ಕೇಂದ್ರವು ಮಾದರಿ ಬುಡಕಟ್ಟು ಗ್ರಾಮ ಪಂಚಾಯಿತಿಯಾಗಿ ಅಭಿವೃದ್ಧಿಪಡಿಸಲು ಅಂಗರ ಬ್ಲಾಕ್‌ನ ನವಘರ್ ಗ್ರಾಮ ಪಂಚಾಯಿತಿಯನ್ನು ಸಹ ಅಳವಡಿಸಿಕೊಂಡಿದೆ. ೩) **ಸಾರಗಾಛಿ** ಕೇಂದ್ರವು ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನದ ಲಾಭವನ್ನು ಪಡೆದುಕೊಳ್ಳಲು ಕೃಷಿ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಿದೆ.

ನಮ್ಮ ಹಲವಾರು ಕೇಂದ್ರಗಳು ಸ್ವಚ್ಛತಾ ಕಾರ್ಯಕ್ರಮ ಮತ್ತು ಜಾಗೃತಿಯ ಅಭಿಯಾನಗಳನ್ನು ನಡೆಸುವ ಮೂಲಕ ಸ್ವಚ್ಛಭಾರತ ಅಭಿಯಾನವನ್ನು ಕೈಗೆತ್ತಿಕೊಂಡವು. ೧) **ಮಂಗಳೂರು:** ಅ) ಮಂಗಳೂರು ನಗರದ ಸುತ್ತಮುತ್ತ ೩೬ ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಿತು. ಆ) ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ೫೫೮ ಸ್ವಚ್ಛತಾ ಅಭಿಯಾನವನ್ನು ನಡೆಸಲಾಯಿತು. ಇ) ಕಾಲೇಜುಗಳಲ್ಲಿ ೩೫ ಸೆಮಿನಾರುಗಳನ್ನು ನಡೆಸಲಾಯಿತು. ಇದರಲ್ಲಿ ಸುಮಾರು ೧೨,೩೦೦ ಯುವಕ-ಯುವತಿಯರು ಭಾಗವಹಿಸಿದ್ದರು. ೨)**ರಾಮಹರಿ ಪುರ** ಕೇಂದ್ರವು ೫೭ ಶೌಚಾಲಯಗಳನ್ನು ಬಾಂಕುರ ಜಿಲ್ಲೆಯ ಬಿರಾ ಹಳ್ಳಿಯಲ್ಲಿ ನಿರ್ಮಿಸಿಕೊಟ್ಟಿದೆ.

**ರಾಮಕೃಷ್ಣ ಮಠಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೊಸ ಬೆಳವಣಿಗೆಗಳು ಉಲ್ಲೇಖನೀಯ:** ೧) **ಬೇಲೂರು ಮಠ**ದ ಸಾಧು ನಿವಾಸದ ಬಳಿ gangway and pantoon ಮಾದರಿಯ jettyಯನ್ನು ಸ್ಥಾಪಿಸಲಾಯಿತು. ೨) **ಕಾಂಕುರ್‌ಗಾಛಿ** ಕೇಂದ್ರವು ಒಂದು ಔಷಧಾ ಲಯವನ್ನು ನಿರ್ಮಿಸಿದೆ. ೩) **ರಾಜ್‌ಕೋಟ್** ಕೇಂದ್ರವು ದಂತ ಘಟಕವನ್ನು ಪ್ರಾರಂಭಿಸಿದೆ. ೪) **ಶ್ಯಾಮಪುಕುರ ಬಾಟಿ** ಕೇಂದ್ರವು ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ನಾಲ್ಕು ಅಂತಸ್ತಿನ ಕಟ್ಟಡವನ್ನು ಖರೀದಿಸಿತು.

**ಭಾರತದ ಹೊರಗೆ ಈ ಕೆಳಗಿನ ಹೊಸ ಬೆಳವಣಿಗೆಗಳು ವಿಶೇಷವಾಗಿ ಉಲ್ಲೇಖನೀಯ:** ೧) **ಸ್ಯಾನ್‌ಫ್ರಾನ್ಸಿಸ್ಕೋ** ಕೇಂದ್ರಕ್ಕೆ ಹಳೆಯ ದೇವ ಸ್ಥಾನದ ಪುನಃ ಸ್ಥಾಪನೆ ಮತ್ತು ಸಂರಕ್ಷಣೆಗಾಗಿ ಕ್ಯಾಲಿಫೋರ್ನಿಯಾ ಹೆರಿಟೇಜ್ ಕೌನ್ಸಿಲ್ ಪ್ರಮಾಣ ಪತ್ರವನ್ನು ನೀಡಿತು. ೨) **ಚಂದಪುರ** (ಬಾಂಗ್ಲಾದೇಶ) ಕೇಂದ್ರದಲ್ಲಿ ಹೊಸದಾಗಿ ನಿರ್ಮಿಸಲಾದ ವಿವೇಕಾನಂದ ಭವನ ಮತ್ತು ಬ್ರಹ್ಮಾನಂದ ಭವನವನ್ನು ಉದ್ಘಾಟಿಸಲಾಯಿತು.

ಕೇರಳ, ಕರ್ನಾಟಕ, ಈಶಾನ್ಯ ಮತ್ತು ಇತರ ಭಾಗಗಳಲ್ಲಿ ಉಂಟಾದ ವಿನಾಶಕಾರಿ ಪ್ರವಾಹಗಳು ಮತ್ತು ಆಂಧ್ರಪ್ರದೇಶ, ಒಡಿಶಾ, ತಮಿಳುನಾಡು ಮತ್ತು ಪಶ್ಚಿಮಬಂಗಾಳದಲ್ಲಿ ಟಿಟ್ಲಿ ಮತ್ತು ಗಜಾದಂತಹ ಚಂಡಮಾರುತ ಸೇರಿದಂತೆ ಉಂಟಾಗಿರುವ ನೈಸರ್ಗಿಕ ವಿಪತ್ತುಗಳ ಹಿನ್ನೆಲೆಯಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ ಹಲವಾರು **ಪರಿಹಾರ ಮತ್ತು ಮರುವಸತಿ ಕಾರ್ಯಾಚರಣೆ**ಯನ್ನು ಕೈಗೊಂಡಿದೆ. ಕಾರ್ಯಾಚರಣೆಯಲ್ಲಿ ೪೨.೪೧ ಕೋಟಿ ವೆಚ್ಚವಾಗಿದೆ ಮತ್ತು ೯.೭೩ ಲಕ್ಷಜನರಿಗೆ ಪ್ರಯೋಜನವಾಗಿದೆ.

ಈ ವರ್ಷದ ಅವಧಿಯಲ್ಲಿ ರಾಮಕೃಷ್ಣ ಮಿಷನ್ ಕೈಗೊಂಡ **ಸಮಾಜ ಕಲ್ಯಾಣ ಕಾರ್ಯಕ್ರಮಗಳ** ಅಡಿಯಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವೃದ್ಧರಿಗೆ, ರೋಗಿಗಳಿಗೆ ಹಾಗೂ ನಿರ್ಗತಿಕರಿಗೆ ಆರ್ಥಿಕ ನೆರವು ಇತ್ಯಾದಿಗಳನ್ನು ನೀಡಲಾಯಿತು. ಇವುಗಳಿಗೆ ೨೧.೪೫ ಕೋಟಿ ರೂಪಾಯಿಗಳು ವಿನಿಯೋಗವಾಗಿವೆ.

**ವೈದ್ಯಕೀಯ ಸೇವೆ**ಗಳನ್ನು ೭೮.೩೨ ಲಕ್ಷಕ್ಕಿಂತ ಹೆಚ್ಚು ಜನರಿಗೆ ೧೦ ಆಸ್ಪತ್ರೆ, ೮೮ ಚಿಕಿತ್ಸಾಲಯ, ೪೧ ಸಂಚಾರಿ ವೈದ್ಯಕೀಯ ಘಟಕ ಹಾಗೂ ೯೧೬ ವೈದ್ಯಕೀಯ ಶಿಬಿರಗಳ ಮೂಲಕ ನೀಡಲಾಯಿತು. ಇದಕ್ಕೆ ೨೪೯.೪೨ ಕೋಟಿ ರೂಪಾಯಿಗಳನ್ನು ವ್ಯಯ ಮಾಡಲಾಗಿದೆ.

ಶಿಶುವಿಹಾರದಿಂದ ಹಿಡಿದು ವಿಶ್ವವಿದ್ಯಾಲಯದವರೆಗಿರುವ ನಮ್ಮ ವಿದ್ಯಾಸಂಸ್ಥೆಗಳಲ್ಲಿ, ಹಾಗೂ ಅಸಾಂಪ್ರದಾಯಿಕ ಶಿಕ್ಷಣ ವಿಭಾಗ ಗಳು, ರಾತ್ರಿ ಶಾಲೆಗಳು, ಖಾಸಗಿ ತರಗತಿಗಳು ಇತ್ಯಾದಿಗಳಲ್ಲಿ ಸುಮಾರು ೨.೬೮ ಲಕ್ಷ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿದ್ದಾರೆ. ಈ **ಶೈಕ್ಷಣಿಕ ಕಾರ್ಯಕ್ರಮ**ಗಳಿಗೆ ಒಟ್ಟು ೩೫೭.೯೭ ಕೋಟಿ ರೂಪಾಯಿಗಳು ವಿನಿಯೋಗವಾಗಿವೆ.

**ಗ್ರಾಮೀಣ ಹಾಗೂ ಬುಡಕಟ್ಟು ಜನಾಂಗದವರಿಗಾಗಿ** ನಡೆಸಿದ ಹಲವಾರು **ಅಭಿವೃದ್ಧಿ ಯೋಜನೆ**ಗಳಿಗೆ ೭೩.೨೧ ಕೋಟಿ ರೂಪಾಯಿ ಗಳನ್ನು ವ್ಯಯ ಮಾಡಲಾಯಿತು. ಸುಮಾರು ೭೦.೫೬ ಲಕ್ಷ ಜನರು ಇದರ ಲಾಭ ಪಡೆದರು.

ಈ ಸಂದರ್ಭದಲ್ಲಿ ರಾಮಕೃಷ್ಣ ಮಿಷನ್ ಮತ್ತು ರಾಮಕೃಷ್ಣ ಮಠದ ಎಲ್ಲ ಸೇವಾಕಾರ್ಯಗಳನ್ನು ಮುನ್ನಡೆಸಲು ನೆರವಾದ ಸಂಸ್ಥೆಯ ಎಲ್ಲ ಸದಸ್ಯರಿಗೂ, ಸ್ನೇಹಿತರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

(ಸ್ವಾಮಿ ಸುವೀರಾನಂದ)

೧೫ ಡಿಸೆಂಬರ್, ೨೦೧೯ ಪ್ರಧಾನ ಕಾರ್ಯದರ್ಶಿ